ಪ್ರ-72, ಕ್ರ-95 ರವ್ಯಾವಳಿ

**ಶ್ರೀ ಗಣಪತಿ ದುಮ್ಮಾ ಉಳ್ವೇಕರ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ನಿಯಮ 72ರಡಿ ನೀಡಿರುವ ಸೂಚನೆ ಸಂಖ್ಯೆ 95ಕ್ಕೆ ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಹೇಳಿಕೆ**

---

## ಸೂಚನೆ:-

**ಮತ್ಸ್ಯಸಿರಿ ಯೋಜನೆಯಲ್ಲಿ ಟ್ರಾಲರ್ ಅಥವಾ ಪರ್ಶಿಯನ್ ದೋಣಿಗಳನ್ನು ನಿರ್ಮಿಸಲು ಅವಕಾಶ ನೀಡುವ ಕುರಿತು.**

## ಹೇಳಿಕೆ:-

ಎಲ್ಲಾ ಕಡಲ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಯಲ್ಲಿ ಮತ್ತು ವಿದೇಶಿ ವಿನಿಮಯದಲ್ಲಿ ಮೀನುಗಾರಿಕೆ ವಲಯವು ಪ್ರಮುಖ ಪಾತ್ರ ವಹಿಸುತ್ತದೆ. ಹಾಗೆಯೇ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಖಚಿತಪಡಿಸುತ್ತದೆ ಮತ್ತು ಉದ್ಯೋಗ ಅವಕಾಶಗಳನ್ನು ಸೃಷ್ಟಿಸುತ್ತದೆ. EEZ ಮೇಲಿನ ಸಂಪೂರ್ಣ ಹಕ್ಕುಗಳೊಂದಿಗೆ, ನಮ್ಮ ಕರಾವಳಿಯಿಂದ 200 ನಾಟಿಕಲ್ ಮೈಲುಗಳವರೆಗಿನ ಸಮುದ್ರ ಸಂಪನ್ಮೂಲಗಳನ್ನು ಸಂರಕ್ಷಿಸುವ, ಅಭಿವೃದ್ಧಿಪಡಿಸುವ ಮತ್ತು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ.

ಕರ್ನಾಟಕದ ಕಡಲ ಮೀನು ಹಿಡುವಳಿ ಹೆಚ್ಚಾಗಿ 100 ಮೀಟರ್ ಆಳದವರೆಗೆ ಮಾತ್ರ ಕೇಂದ್ರೀಕೃತವಾಗಿದೆ ಮತ್ತು ಸುಮಾರು 90 ಪ್ರತಿಶತದಷ್ಟು ಮೀನು ಹಿಡುವಳಿ 50 ಮೀ. ಆಳದ ನೀರಿನಿಂದ ದೊರಕುತ್ತದೆ.

ಕಡಲ ಮೀನುಗಾರಿಕೆ ಸಾಮರ್ಥ್ಯದ ಬಗ್ಗೆ ಇತ್ತೀಚಿನ ವರದಿಗಳ ಪ್ರಕಾರ ತೀರ ಸಮೀಪದ ನೀರಿನಲ್ಲಿ ಮೀನುಗಾರಿಕೆಯ ಒತ್ತಡವು ಗಣನೀಯವಾಗಿ ಹೆಚ್ಚಾಗಿರುವ ಬಗ್ಗೆ ಉಲ್ಲೇಖಗಳಿದ್ದು, ಇದರ ಪರಿಣಾಮವಾಗಿ ತೀರ ಪ್ರದೇಶದಲ್ಲಿ ಕಡಿಮೆ ಮೀನು ಹಿಡುವಳಿಯಾಗುತ್ತಿದೆ. ಕರಾವಳಿ ತೀರದಲ್ಲಿ ಹೆಚ್ಚು ಮೀನುಗಾರಿಕೆ ನಡೆಸುವುದು ಸುಸ್ಥಿರ ಇಳುವರಿಗೆ ಹಾನಿಕಾರಕವಾಗಿದೆ. ಈ ನಿಟ್ಟಿನಲ್ಲಿ ಆಹಾರ ಮತು ಪೌಷ್ಟಿಕಾಂಶದ ಭದ್ರತೆಗಾಗಿ ಮತ್ತು ಮೀನುಗಾರರ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ಪರ್ಯಾಯ ಸಂಪನ್ಮೂಲವನ್ನು ಕಂಡುಹಿಡಿಯುವುದು ಅನಿವಾರ್ಯವಾಗಿದೆ. ಹೀಗಾಗಿ ಆಳಸಮುದ್ರದಲ್ಲಿ ಸಾಂಪ್ರದಾಯಿಕವಲ್ಲದ ಮತ್ತು ಪರಿಣಾಮಕಾರಿಯಾಗಿ ಹಿಡುವಳಿಯಾಗದೇ ಇರುವ ಸಂಪನ್ಮೂಲಗಳನ್ನು ಹಿಡುವಳಿ ಮಾಡುವ ಬಗ್ಗೆ ಗಮನಹರಿಸುವುದು ಅತ್ಯಗತ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯಡಿ ಆಳಸಮುದ್ರ ಮೀನುಗಾರಿಕೆ ಮಾಡುವವರಿಗೆ ಉತ್ತೇಜನ ನೀಡುವ ಸಲುವಾಗಿ ಆಳಸಮುದ್ರ ಮೀನುಗಾರಿಕೆ ದೋಣಿಗಳನ್ನು ಹೊಂದಲು ಸಹಾಯಧನ ನೀಡುವ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಈ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಒಂದು ದೋಣಿಯ ಘಟಕ ವೆಚ್ಚ ರೂ. 120.00 ಲಕ್ಷಗಳಾಗಿದ್ದು, ಸಾಮಾನ್ಯ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳಾ ವರ್ಗಗಳ ಫಲಾನುಭವಿಗಳಿಗೆ ಕ್ರಮವಾಗಿ 40% ಮತ್ತು 60% ರಷ್ಟು ಆರ್ಥಿಕ ಸಹಾಯವನ್ನು ನೀಡಲು ಅವಕಾಶವಿದೆ.

ರಾಜ್ಯದಲ್ಲಿ ಮತ್ಸ್ಯಸಿರಿ ಯೋಜನೆಯನ್ನು ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯೊಂದಿಗೆ ಸಂಯೋಜಿಸಿ ಅನುಷ್ಠಾನ ಮಾಡಲಾಗುತ್ತಿದ್ದು, ಈ ಯೋಜನೆಗೆ ಕೇಂದ್ರ ಸರ್ಕಾರವು ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಅದರಂತೆ ಅನುಷ್ಠಾನ ಮಾಡಲಾಗುತ್ತಿದೆ.

ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಮಾರ್ಗಸೂಚಿ ಪ್ರಕಾರ ಆಳಸಮುದ್ರ ಬೋಟ್ ನಿರ್ಮಾಣ ಮಾಡಲು ಇಚ್ಛಿಸುವ ಫಲಾನುಭವಿಯು ತನ್ನ ಹಳೆ ಟ್ರಾಲರ್ ಬೋಟನ್ನು ನಿಯಮಾನುಸಾರ ನಿಷ್ಕ್ರಿಯಗೊಳಿಸಿ ನಿರ್ದಿಷ್ಟ ಸಂಪನ್ಮೂಲ ಗಳನ್ನು ಗಮನದಲ್ಲಿರಿಸಿಕೊಂಡು ಮೀನುಗಾರಿಕೆ ನಡೆಸುವ ಸಲುವಾಗಿ ಲಾಂಗ್ ಲೈನರ್ ಅಥವಾ ಗಿಲ್ ನೆಟ್ ಬೋಟ್‌ಗಳನ್ನು ಮೀನುಗಾರಿಕೆ ಇಲಾಖೆಯಿಂದ ಎಂಪನೆಲ್ ಮಾಡಲಾದ ದೋಣಿ ನಿರ್ಮಾಣ ಯಾರ್ಡ್‌ಗಳಲ್ಲಿಯೇ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನಿರ್ಮಿಸಬೇಕಾಗಿರುತ್ತದೆ. ಕೇಂದ್ರ ಸರ್ಕಾರವು ನೀಡಿದ ಸೂಚನೆ ಅನ್ವಯ ಈಗಿರುವ ಮೀನುಗಾರಿಕೆ ದೋಣಿಗಳ ಸಂಖ್ಯೆಯು ಹೆಚ್ಚಾಗದಂತೆ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರಗಳಿಗೆ ಸೂಚಿಸಿರುವ ನಿಟ್ಟಿನಲ್ಲಿ ಟ್ರಾಲರ್ ಅಥವಾ ಪರ್ಸೀನ್ ದೋಣಿಗಳನ್ನು ಹೊಸದಾಗಿ ನಿರ್ಮಿಸಲು ಸಾಧ್ಯತಾ ಪತ್ರ ನೀಡುವುದನ್ನು ನಿಲ್ಲಿಸಲಾಗಿದೆ. ಹೀಗಾಗಿ ಟ್ರಾಲರ್ ಮತ್ತು ಪರ್ಸೀನ್ ದೋಣಿಗಳನ್ನು ನಿರ್ಮಿಸಲು ಅವಕಾಶವಿರುವುದಿಲ್ಲ.

---

ಸಂಖ್ಯೆ: ಪಸಂಮೀ ಇ-219 ಮೀಇಯೋ 2022

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು